# ಶ್ರೀಮಾತೆಯವರೊಂದಿಗೆ ಮಾತುಕತೆ

ಬಂಗಾಳಿ ಮೂಲ : **ಲಕ್ಷ್ಮೀಮಣಿ ದೇವಿ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

(ಶ್ರೀರಾಮಕೃಷ್ಣರ ಅಣ್ಣ ರಾಮೇಶ್ವರನ ಎರಡನೆಯ ಮಗಳೇ ಲಕ್ಷ್ಮೀಮಣಿ ದೇವಿ . ಶ್ರೀರಾಮಕೃಷ್ಣರ ಭಕ್ತರ ನಡುವೆ ಅವಳು 'ಲಕ್ಷ್ಮೀ-ದಿ' ಅಥವಾ 'ಲಕ್ಷ್ಮೀ ದೀದಿ' ಎಂದೇ ಪರಿಚಿತಳಾಗಿದ್ದಳು. *– ಸಂ.* )

ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿದ್ದಾಗ ಶ್ರೀಮಾತೆ ಮತ್ತು ನಾನು ಶ್ರೀರಾಮಕೃಷ್ಣರ ಕೋಣೆಯ ಉತ್ತರಭಾಗದಲ್ಲಿದ್ದ ನಹಬತ್ ಖಾನೆಯ ಕೆಳ ಅಂತಸ್ತಿನಲ್ಲಿ ವಾಸಿಸುತ್ತಿದ್ದೆವು. ಶ್ರೀಮಾತೆಯವರೊಂದಿಗೆ ಈ ನಹಬತ್‌ನಲ್ಲೇ ನಾನು ಅನೇಕ ದಿನ ವಾಸಿಸಿದ್ದೆ. ಆಗ ಶ್ರೀಮಾತೆಯವರ ವಯಸ್ಸು ಇಪ್ಪತ್ತೆರಡು-ಇಪ್ಪತ್ತಮೂರು; ನನ್ನದು ಹದಿನಾಲ್ಕು-ಹದಿನೈದು. ನಹಬತ್‌ನ ಸಣ್ಣ ಕೋಣೆಯಲ್ಲಿ ಶ್ರೀಮಾತೆ, ನಾನು, ಗೋಲಾಪ್-ಮಾ, ಯೋಗಿನ್-ಮಾ ಹಾಗೂ ಆಗಾಗ ಮಾಸ್ಟರ್ ಮಹಾಶಯರ ಪತ್ನಿ, ಚುನಿಲಾಲ್ ಅವರ ಪತ್ನಿ, ಗೌರಿ-ಮಾ, ಯೋಗಿನ್ ಸ್ವಾಮಿಗಳ (ಸ್ವಾಮಿ ಯೋಗಾನಂದರು; ಅವರು ವಿವಾಹವಾಗಿದ್ದರು) ಪತ್ನಿ-ಎಲ್ಲರೂ ತಂಗುತ್ತಿದ್ದೆವು. ಇದಲ್ಲದೆ, ಅಲ್ಲೇ ಎಲ್ಲಾ ವಸ್ತುಗಳೂ ತುಂಬಿರುತ್ತಿದ್ದವು. ಎಲ್ಲ ಬಗೆಯ ಅಡುಗೆ ಸಾಮಾನುಗಳು — ಕಟ್ಟಿಗೆ, ಉಪ್ಪು, ನೀರಿನ ಹಂಡೆಯವರೆಗೆ; ಬಳಿಕ ಮರದ ಸಂದೂಕ (ಟ್ರಂಕ್), ಪೋರ್ಟಮನ್- ಇವೆಲ್ಲ ಇರುತ್ತಿದ್ದವು. ಶ್ರೀಮಾತೆಯವರು ಅಡುಗೆ ಮಾಡಬೇಕಿತ್ತು, ಅದಕ್ಕೆ ನಾನು ಸಹಾಯ ಮಾಡಿಕೊಡುತ್ತಿದ್ದೆ. ಅಡುಗೆ ಕೂಡ ಹಲವು ರೀತಿಯದು. ಶಿಷ್ಯಂದಿರಿಗೆ ತಿಂಡಿ, ಅನ್ನ-ದಾಲ್, ಪಲ್ಯ; ರಾತ್ರಿಗೆ ಗಟ್ಟಿ ದಾಲ್, ದಪ್ಪನೆಯ ಚಪಾತಿಗಳು. ಠಾಕೂರರಿಗಾಗಿ ಅನ್ನ ಹಾಗೂ ಝೋಲ್ (ಕೇವಲ ಉಪ್ಪಿನೊಂದಿಗೆ ಬೇಯಿಸಿದ ಸರಳವಾದ ತರಕಾರಿ ಪದಾರ್ಥ) ಇತ್ಯಾದಿ. ನಮಗೆ ಸಾಮಾನ್ಯವಾಗಿ ಅನ್ನವಾಗಲಿ, ಬೇರೇನೇ ಆಗಲಿ ಇರುತ್ತಿತ್ತು. ಇದಲ್ಲದೆ, ಯಾರೋ ಭಕ್ತರು ಬೆಳಿಗ್ಗೆಯೇ ಬಂದು, ಗಾಡಿಯಿಂದ ಇಳಿಯುತ್ತಿದ್ದಾಗಲೇ ಕೂಗಿ ಹೇಳಿ ಹೋಗುತ್ತಿದ್ದರು — 'ಇವತ್ತು ಕಡ್ಲೆ ದಾಲ್ ಊಟ ಮಾಡುತ್ತೇನೆ' ಎಂದು. ಶ್ರೀಮಾತೆ ಮತ್ತೆ ಕಡ್ಲೆಬೇಳೆ ಬೇಯಿಸಲು ಇಡುತ್ತಿದ್ದರು.

ನಹಬತ್‌ನ ಅಗಲಕಿರಿದಾದ ವರಾಂಡಾದಲ್ಲಿ ತಲೆಗೆ ಸ್ಪರ್ಶವಾಗುವ ತನಕ ಬಿದಿರಿನ ತಡಿಕೆಯಿಂದ ಮುಚ್ಚಲಾಗಿತ್ತು. ಅದರೊಳಗೆಯೇ ನಾವು ತಂಗಬೇಕಿತ್ತು. ಅದ್ದರಿಂದಲೇ ಶ್ರೀರಾಮಕೃಷ್ಣರು ನಮ್ಮನ್ನು 'ಗೂಡಿನ ಹಕ್ಕಿಗಳು', ಶುಕ-ಸಾರಿಕೆಯರು ಎಂದು ಕರೆಯುತ್ತಿದ್ದರು. ಒಂದೊಂದು ಸಲ ಅವರ ಕೋಣೆಯಲ್ಲಿ ಹಾಡು, ಕೀರ್ತನೆ ಇತ್ಯಾದಿಗಳು ನಡೆಯುವುದಿದ್ದರೆ, ಮೊದಲೇ ರಾಮಲಾಲ-ದಾದಾಗೆ ಹೇಳಿ ನಹಬತ್‌ನ ದಿಕ್ಕಿಗಿರುವ ಅವರ ಕೋಣೆಯ ಬಾಗಿಲನ್ನು ತೆರೆದು ಇಡಿಸುತ್ತಿದ್ದರು. ''ಇಲ್ಲಿ



ಚಿತ್ರದ ಬಲತುದಿಯಲ್ಲಿ ಕುಳಿತಿರುವವರೇ ಲಕ್ಷ್ಮೀದೇವಿ

ಎಷ್ಟೊಂದು ಭಕ್ತಿ-ಭಾವಗಳೆಲ್ಲ ನಡೆಯುತ್ತವೆ; ಅವನ್ನೆಲ್ಲ ಅವರು ನೋಡಬೇಡವೆ? ಕೇಳಬೇಡವೆ? ಹಾಗೆ ಕೇಳದಿದ್ದರೆ ಅವರು ಹೇಗೆ ಕಲಿಯುತ್ತಾರೆ?'' ಎನ್ನುತ್ತಿದ್ದರು. ತಡಿಕೆಯಲ್ಲಿ ಒಂದು ಬೆರಳಿನಷ್ಟು ಅಗಲವಾದ ತೂತು ಮಾಡಿ ನಾವು ಶ್ರೀರಾಮಕೃಷ್ಣರ ಕೋಣೆಯಲ್ಲಿ ನಡೆಯುತ್ತಿದ್ದುದನ್ನು ನೋಡುತ್ತಿದ್ದೆವು. ಸಾಮಾನ್ಯವಾಗಿ ಅವರ ಕೋಣೆಯ ಉತ್ತರ ಭಾಗದಲ್ಲಿದ್ದ ಬಾಗಿಲು ತೆರೆದೇ ಇರುತ್ತಿತ್ತು. ಎಷ್ಟೊಂದು ಹಾಡು, ಕೀರ್ತನೆ, ನರ್ತನ, ಸಮಾಧಿ ಹಾಗೂ ಭಕ್ತರೊಂದಿಗೆ ಎಂಥ ಆನಂದ! ಒಂದು ದಿನ ತಡಿಕೆಯ ರಂಧ್ರ ತುಸು ದೊಡ್ಡದಾಗಿದ್ದುದನ್ನು ನೋಡಿ ಶ್ರೀರಾಮಕೃಷ್ಣರು ರಾಮಲಾಲ-ಅಣ್ಣನಿಗೆ ಹೇಳಿದರು: ''ನೋಡು, ರಾಮಲಾಲ ನಿನ್ನ ಚಿಕ್ಕಮ್ಮನ ಪರ್ದಾದಲ್ಲಿ ತೂತಾಗಿಬಿಟ್ಟಿದೆ!''

ನಮಗೆ ಎಂಥ ಆನಂದವುಂಟಾಗುತ್ತಿತ್ತು ಎಂಬುದನ್ನು ಹೇಗೆ ಹೇಳಲಿ? ನಾನು ಶ್ರೀಮಾತೆಯವರೊಂದಿಗೆ ನಹಬತ್‌ನಲ್ಲಿ ವಾಸ

ವಾಗಿರುತ್ತಿದ್ದಾಗ ನನಗೆ ಎಂಥ ಆನಂದವುಂಟಾಗುತ್ತಿತ್ತೋ ಅದರೊಂದಿಗೆ ಹೋಲಿಸಿದರೆ, ಬ್ರಹ್ಮಾನಂದವೂ ತುಚ್ಛವಾಗಿ ಕಾಣುವುದು. ಅದೇ ರೀತಿ ಶ್ರೀರಾಮಕೃಷ್ಣರೊಂದಿಗೆ – ಅವರು ಪೂರ್ಣದಲ್ಲಿ ಪೂರ್ಣರು. ಪೂರ್ಣಬ್ರಹ್ಮ ಎಂದರೆ, ಸೃಷ್ಟಿ–ಸ್ಥಿತಿ–ಲಯಗಳ ಕರ್ತೃ ಎಂದರೆ, ತುಸು ಐಶ್ವರ್ಯವೆಂಬ ಅರ್ಥವಾಗುವುದು. ಆದರೆ ನಮ್ಮ ಠಾಕೂರರಲ್ಲಿ ಐಶ್ವರ್ಯವೆಂಬ ಹೆಸರಿನ ವಾಸನೆಯೇ ಕಂಡುಬರದು. ಅವರು ಪ್ರೇಮದಲ್ಲಿ ಎರಕ ಮಾಡಿರುವ, ಥಳಥಳಿಸುವ ಮೂರ್ತಿ– ಪ್ರೇಮದ ಸಾರವಸ್ತು ಅವರು.

ಶ್ರೀಮಾತೆಯವರು ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಲು ಹೊರಟಾಗ ಅವರ ತಾಯಿಗೆ (ಚಂದ್ರಮಣೀದೇವಿ) ಒಂದು ಬಾರಿ ಪ್ರಣಾಮ ಮಾಡಿಬಿಡುತ್ತಿದ್ದರು.

ದಕ್ಷಿಣೇಶ್ವರದಲ್ಲಿದ್ದಾಗ ಒಂದು ದಿನ ಶ್ರೀಮಾತೆ ಹೇಳಿದರು: ''ನಿನ್ನೆ ಅವರು ನನ್ನ ನಾಲಿಗೆಯ ಮೇಲೆ ಬರೆದಿದ್ದರು. ನೀನೂ ಹೋಗಿ ಕೇಳು.'' ನಾನಂದೆ, ''ನನಗೆ ತುಂಬ ನಾಚಿಕೆಯಾಗುತ್ತದೆ. ನಾನು ಹೇಗೆ ಕೇಳಲಿ? ಅಲ್ಲಿ ಯಾರುಯಾರೋ ಇರುತ್ತಾರೆ.'' ಅನಂತರ ಒಮ್ಮೆ ನಾನು ಠಾಕೂರರಿಗೆ ಪ್ರಣಾಮ ಮಾಡಲು ಹೋಗಿದ್ದೆ. ನಾನು ಮೌನವಾಗಿದ್ದೆ. ಅವರು ತಾವಾಗಿಯೇ ಹೇಳಿದರು, ''ನಿನಗೆ ಯಾವುದಾದರೂ ದೇವತೆ ಇಷ್ಟವೆ?'' ನನಗೆ ಒಳಗೊಳಗೆಯೇ ತುಂಬಾ ಆನಂದವುಂಟಾಗುತ್ತಿತ್ತು. ನಾನಂದೆ – ''ರಾಧಾಕೃಷ್ಣ.'' ಅವರು ನನ್ನ ನಾಲಿಗೆಯಲ್ಲಿ ಬೀಜಮಂತ್ರದೊಂದಿಗೆ ಆ ನಾಮವನ್ನು ಬರೆದುಕೊಟ್ಟರು. ಬಳಿಕ ಬಾಯಲ್ಲಿ ಉಚ್ಚರಿಸಿ, ಹೇಳಿಸಿದರು. ಆಗ ನನ್ನ ಕೊರಳಲ್ಲಿ ತುಳಸೀಮಾಲೆಯಿತ್ತು. ಕಾಮಾರಪುಕುರದ ಜಮೀನ್ದಾರರಾದ ಲಾಹಾಬಾಬುಗಳ ಮನೆಯ ಪ್ರಸನ್ನದೀದಿ (ಪ್ರಸನ್ನಮಯಿ) ಅದನ್ನು ಹಾಕಿ ಕೊಟ್ಟಿದ್ದಳು. ಅನಂತರ ಹೇಳಿದ್ದಳು, ''ಈ ಮಾಲೆಯನ್ನು ಧರಿಸಿಕೋ. ಇದು ನಿನಗೆ ಚೆನ್ನಾಗಿ ಕಾಣಿಸುತ್ತದೆ.'' ನಾನು ಮತ್ತು ಶ್ರೀಮಾತೆಯವರು ಈ ಹಿಂದೆ ಉತ್ತರಭಾಗದ (ವಾಯವ್ಯ ಪ್ರದೇಶದ) ಸಂನ್ಯಾಸಿಗಳಿಂದ ಶಕ್ತಿಮಂತ್ರ ದೀಕ್ಷೆಯನ್ನು ಪಡೆದಿದ್ದೆವು. ಭಾರೀ ಗಾತ್ರದ, ಅತ್ಯುತ್ತಮ ವ್ಯಕ್ತಿತ್ವ ಅವರದು. ಶಾಂತಮೂರ್ತಿಯಾಗಿದ್ದರು ಕೂಡ. ಅವರ ಹೆಸರು ಸ್ವಾಮಿ ಪೂರ್ಣಾನಂದ ಎಂದು. ನೋಡಲು ವೃದ್ಧರಾಗಿದ್ದರು; ಪೂರ್ಣವಾಗಿ ಪಕ್ವಗೊಂಡ ಮಾವಿನ ಹಣ್ಣಿನಂತೆ. ಈ ದೀಕ್ಷೆಯ ವಿಷಯವನ್ನು ಶ್ರೀಮಾತೆಯವರು ಶ್ರೀರಾಮಕೃಷ್ಣರಿಗೆ ಅನಂತರ ಹೇಳಿದ್ದರು. ಅದಕ್ಕೆ ಶ್ರೀರಾಮಕೃಷ್ಣರು, ''ಅದೇನೇ ಇರಲಿ, ಲಕ್ಷ್ಮಿಗೆ ನಾನೇ ಸರಿಯಾದದ್ದನ್ನು ಕೊಟ್ಟಿದ್ದೇನೆ'' ಎಂದಿದ್ದರು. ಆ ಸಂನ್ಯಾಸಿಗಳು ನಮ್ಮ ಕಾಮಾರಪುಕುರ ಗ್ರಾಮಕ್ಕೆ ಹೋಗಿದ್ದರು. ಅವರಿಂದ ಶ್ರೀರಾಮಕೃಷ್ಣರು ಹಾಗೂ ನನ್ನ ತಂದೆ (ರಾಮೇಶ್ವರ, ಶ್ರೀರಾಮಕೃಷ್ಣರ ಅಣ್ಣ) ಏನೇನೋ ಮಂತ್ರಗಳನ್ನು ಪಡೆದಿದ್ದರು ಎಂಬುದಾಗಿ ನಾನು ಕೇಳಿದ್ದೆ.

ಶ್ರೀರಾಮಕೃಷ್ಣರಿಗೆ ರಾತ್ರಿಹೊತ್ತು ಹೆಚ್ಚು ನಿದ್ದೆ ಬರುತ್ತಿರಲಿಲ್ಲ. ಇನ್ನೂ ರಾತ್ರಿ ಮೂರು ಗಂಟೆಗೇ ಎದ್ದು ಅವರು ಝಾವುತಲಾ ಕಡೆಗೆ ಶೌಚಕ್ಕೆ ಹೋಗುತ್ತಿದ್ದರು. ಅಲ್ಲಿಗೆ ಹೋಗುವಾಗ ನಹಬತ್ ಸಮೀಪಕ್ಕೆ ಬಂದು ನಮ್ಮನ್ನು ಕರೆಯುತ್ತಿದ್ದರು: ''ಓ ಲಕ್ಷ್ಮೀ, ಎದ್ದೇಳು. ನಿನ್ನ ಚಿಕ್ಕಮ್ಮನನ್ನೂ ಎಬ್ಬಿಸು. ಇನ್ನು ಎಷ್ಟು ಹೊತ್ತು ನಿದ್ರಿಸುತ್ತೀಯಾ? ಬೆಳಗಾಗಿಬಿಟ್ಟಿದೆ. ಮುಖಕ್ಕೆ ಗಂಗಾಜಲ ಹಾಕಿಕೊಂಡು ಮಾತೆಯ ನಾಮಜಪ ಮಾಡಿ, ಧ್ಯಾನಜಪ ಮಾಡಲು ಆರಂಭ ಮಾಡಿ.'' ಅಷ್ಟರಲ್ಲೇ ನಮ್ಮ ನಿದ್ದೆ ಮುಗಿಯುತ್ತ ಬಂದಿರುತ್ತಿತ್ತು. ಚಳಿಗಾಲದಲ್ಲಿ ಅವರ ಸದ್ದು ಕೇಳಿದರೆ, ನಡುನಡುವೆ ಶ್ರೀಮಾತೆ ಕಂಬಳಿಯ ಒಳಗೇ ಮುದುಡಿ ಮಲಗಿರುತ್ತ ನನಗೆ ಮೆಲುದನಿಯಿಂದ ಹೇಳುತ್ತಿದ್ದರು: ''ನೀನು ಸುಮ್ಮನಿರು. ಅವರ ಕಣ್ಣಿಗೆ ನಿದ್ದೆ ಹತ್ತುವುದಿಲ್ಲ. ಇನ್ನೂ ಏಳಲು ಸಮಯವಾಗಿಲ್ಲ. ಕಾಗೆ, ಕೋಗಿಲೆಗಳ ಕೂಗು ಕೇಳಿಸುತ್ತಿಲ್ಲ. ನೀನು ಓಗೊಡಬೇಡ.'' ನಮ್ಮ ಕಡೆಯಿಂದ ಸದ್ದು ಕೇಳಿಸದಿದ್ದರೆ, ನಾವು ಎದ್ದಿಲ್ಲವೆಂದು ಭಾವಿಸಿ ಶ್ರೀರಾಮಕೃಷ್ಣರು ಬಾಗಿಲ ಕೆಳಗಿನಿಂದ ನೀರು ಸುರಿದುಬಿಡುತ್ತಿದ್ದರು. ಎಲ್ಲವೂ ಒದ್ದೆಯಾಗಿಬಿಡುವುದೆಂಬ ಭಯದಿಂದ ನಾವು ಅವಸರದಿಂದ ಎದ್ದು ಬಿಡಬೇಕಿತ್ತು. 'ಎಲ್ಲವೂ' ಎಂದರೇನು – ಒಂದು ಚಾಪೆ, ಒಂದು ಕಂಬಳಿ ಅಷ್ಟೆ. ಒಂದೊಂದು ಸಲ ಅವೆಲ್ಲ ಒದ್ದೆಯಾಗಿಬಿಡುತ್ತಿತ್ತು. ಅವನ್ನು ಒಣಗಿಸುವುದೇ ಕಷ್ಟವಾಗುತ್ತಿತ್ತು, ಏಕೆಂದರೆ ಹೆಚ್ಚಾಗಿ ಬಿಸಿಲು ಇರುತ್ತಿರಲಿಲ್ಲ. ಹಾಸಿಗೆ ಒದ್ದೆಯಾದ ವಿಷಯವನ್ನು ಕೇಳಿ ಶ್ರೀರಾಮಕೃಷ್ಣರು ಹಾಡುತ್ತಿದ್ದರು: 'ಪ್ರೇಮದಲೆ ದೇಹವನಡರಿದೆ, ಶಾಂತಿಪುರದಲಿ ಮುಳುಗಿದೆ, ನದಿಯಲಿ ತೇಲಿಹೋದೆ..' ಇತ್ಯಾದಿ. ಅಂದಿನಿಂದ ನಮಗೆ ಬೆಳಿಗ್ಗೆ ಬೇಗನೆ ಏಳುವ ಅಭ್ಯಾಸವಾಗಿಬಿಟ್ಟಿತು.



ನಾನು ಗ್ರಾಮದಲ್ಲಿದ್ದಾಗ (ಕಾಮಾರಪುಕುರದಲ್ಲಿ) ಶ್ರೀಮಾತೆಯವರಿಗೆ ಒಂದಿಷ್ಟು ಓದಿಸುತ್ತಿದ್ದೆ. ನಾನು ಶಾಲೆಗೆ ಹೋಗುತ್ತಿದ್ದೆ. ಸಾಕಷ್ಟು ತೊಂದರೆಗಳ ನಡುವೆಯೂ ಶ್ರೀಮಾತೆಯವರು ಓದಲು ಕಲಿತಿದ್ದರು. ನಹಬತ್‌ನಲ್ಲಿ ಇದ್ದಾಗ ಬಿಡುವು ಮಾಡಿಕೊಂಡು ನಾನು ಶ್ರೀಮಾತೆಯವರಿಗೆ ಓದುಬರಹ ಕಲಿಸುತ್ತಿದ್ದೆ. ಒಂದು ದಿನ ಶ್ರೀರಾಮಕೃಷ್ಣರು ಉದ್ಯಾನಮನೆಯ ಪೀತಾಂಬರ ಭಂಡಾರಿಯ ಹನ್ನೊಂದು ವರ್ಷದ ಮಗ ಶರತ್ ಭಂಡಾರಿಗೆ ಹೇಳಿದರು: ''ನೀನು ಲಕ್ಷ್ಮಿಗೆ ಹಾಗೂ ಅವಳ ಚಿಕ್ಕಮ್ಮನಿಗೆ ಮೊದಲನೆಯ ಹಾಗೂ ಎರಡನೆಯ ಪಠ್ಯಪುಸ್ತಕ ಓದಿ ಹೇಳು.'' ಈ ಎರಡು ಭಾಗಗಳು ಸಂಪೂರ್ಣಗೊಂಡಾಗ, ನಮಗೆ ಸಾಧಾರಣ ಓದುಬರಹ ತಿಳಿದ ಮೇಲೆ ಶ್ರೀರಾಮಕೃಷ್ಣರು ಹೇಳಿದರು, ''ಇನ್ನು ನೀವು ಓದುಬರಹ ಕಲಿಯಬೇಕಿಲ್ಲ. ಈಗ ನಿಮಗೆ ರಾಮಾಯಣ ಮುಂತಾದ ಧಾರ್ಮಿಕ ಪುಸ್ತಕಗಳನ್ನು ಚೆನ್ನಾಗಿ ಓದಬಹುದು..''

ದಕ್ಷಿಣೇಶ್ವರದಲ್ಲಿ ಒಂದು ದಿನ ರಾತ್ರಿಹೊತ್ತು ನಾನು ಮತ್ತು ಶ್ರೀಮಾತೆ ಮೆಲುಧ್ವನಿಯಿಂದ ಹಾಡಿಕೊಳ್ಳುತ್ತಿದ್ದೆವು. ಭಜನೆ ಹಾಡು ಭಾವಪೂರ್ಣವಾಗಿ, ಚೆನ್ನಾಗಿ ಕಳೆಕಟ್ಟಿತ್ತು. ಇದನ್ನು ಶ್ರೀರಾಮಕೃಷ್ಣರು ಕೇಳಿಸಿಕೊಂಡರು. ಮರುದಿನ ಅವರು ಶ್ರೀಮಾತೆಯವರಿಗೆ ಹೇಳಿದರು, ''ನಿನ್ನೆ ನೀವಿಬ್ಬರೂ ಚೆನ್ನಾಗಿ ಹಾಡುತ್ತಿದ್ದಿರಿ. ಒಳ್ಳೆಯದು, ತುಂಬ ಒಳ್ಳೆಯದು.''

ಒಂದು ದಿನ ಯದುಮಲ್ಲಿಕನ ಪತ್ನಿ ಒಂದು ಕೆಂಪುಬಣ್ಣದ ದಪ್ಪ ಅಂಚಿನ ವಸ್ತ್ರಕ್ಕೆ ಕಾವಿಬಣ್ಣ ಹಾಕಿ, ಶ್ರೀಮಾತೆಯವರಿಗೆ ಕೊಟ್ಟಳು. ಅವರು ಅದನ್ನು ಧರಿಸಿಕೊಂಡು ಭವತಾರಿಣೀ ಹಾಗೂ ರಾಧಾಕಾಂತ ಮಂದಿರಗಳಿಗೆ ಪ್ರಣಾಮ ಮಾಡಲು ಹೋದ ನಂತರ, ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಲು ಹೋದರು. ಶ್ರೀರಾಮಕೃಷ್ಣರು ಶ್ರೀಮಾತೆಯವರ ಕಾವಿಬಣ್ಣದ ವಸ್ತ್ರವನ್ನು ಕಂಡು, ನನ್ನನ್ನು ಕೇಳಿದರು: ''ಲಕ್ಷ್ಮಿ, ಆ ಬಟ್ಟೆಯನ್ನು ಯಾರು ಕೊಟ್ಟರು? ನಹಬತ್‌ಗೆ ಹೋಗಿ ಆ ಬಟ್ಟೆಯನ್ನು ಪ್ರತ್ಯೇಕವಾಗಿ ಇಡಲು ಹೇಳು. ದಕ್ಷಿಣೇಶ್ವರಕ್ಕೆ ಯಾರಾದರೂ ಭೈರವಿ ಬಂದರೆ, ಅವಳಿಗೆ ಅದನ್ನು ಕೊಡಲು ಹೇಳು. ಕಾವಿ ಬಟ್ಟೆಯ ನೀರು ಪಾದಗಳ ಮೇಲೆ ಬೀಳಬಾರದು.''

ಶ್ರೀರಾಮಕೃಷ್ಣರು ದೇಹತ್ಯಾಗ ಮಾಡುವ ಮುನ್ನ ಕಾಶೀಪುರದ ತೋಟದ ಮನೆಯಲ್ಲಿ ದಿಂಬಿಗೆ ಒರಗಿ ಕುಳಿತಿದ್ದರು. ಆಗ ಅವರು ರೋಗಶಯ್ಯೆಯಲ್ಲಿದ್ದರು; (ಅಂದು ರಾತ್ರಿಯೇ ಅವರು ದೇಹಬಿಟ್ಟರು.) ಈ ಹೊತ್ತು ಎಲ್ಲರೂ ಮೌನವಾಗಿದ್ದಾರೆ. ಅವರ ಮಾತು ನಿಂತುಹೋಗಿದೆಯೆಂದೇ ಎಲ್ಲರೂ ಭಾವಿಸಿದ್ದರು. ಶ್ರೀಮಾತೆ ಮತ್ತು ನಾನು ಅವರ ಬಳಿಗೆ ಹೋದೊಡನೆಯೆ ಅವರು ಮೆಲ್ಲಮೆಲ್ಲನೆ ಹೇಳಿದರು, ''ಬಂದೆಯಾ? ನೋಡು, ನಾನು ಎಲ್ಲಿಗೋ ಹೋಗುತ್ತಿದ್ದೇನೆ. ನೀರಿನ ನಡುವೆ ತುಂಬ ದೂರ ಹೋಗುತ್ತಿದ್ದೇನೆ.'' ಶ್ರೀಮಾತೆ ಅಳತೊಡಗಿದರು. ಆಗ ಶ್ರೀರಾಮಕೃಷ್ಣರು ಹೇಳಿದರು, ''ನೀನೇಕೆ ಚಿಂತೆ ಮಾಡುತ್ತಿರುವೆ? ನೀನು ಹೇಗಿದ್ದೆಯೋ, ಹಾಗೇ ಇರು. ಇವರೆಲ್ಲ (ನರೇನ್ ಮುಂತಾದವರು) ನನ್ನನ್ನು ಹೇಗೆ ನೋಡಿಕೊಂಡರೋ, ಹಾಗೆಯೇ ನಿನ್ನನ್ನೂ ನೋಡಿಕೊಳ್ಳುವರು. ಲಕ್ಷ್ಮಿಯನ್ನು ನೋಡಿಕೋ. ನಿನ್ನ ಬಳಿಯೇ ಇರಿಸಿಕೋ.''

* * * *

(೧೮೮೮ರ ಜನವರಿಯಲ್ಲಿ) ಪುರಿಯಿಂದ ಹಡಗಿನ ಮೂಲಕ ನಾವು ಕಲ್ಕತ್ತೆಗೆ ಮರಳಿ ಬಂದು, ಶ್ರೀಮಾತೆಯವರೊಂದಿಗೆ ಬಲರಾಮಬಾಬುವಿನ ಮನೆಯಲ್ಲಿ ತಂಗಿದೆವು. ಅಲ್ಲಿಂದ ಆಂಟ್‌ಪುರ ಮೂಲಕ ಕಾಮಾರಪುಕುರಕ್ಕೆ ನಾವು ಹೋಗಲು ವ್ಯವಸ್ಥೆಯಾಗಿತ್ತು. ಅಲ್ಲಿ ಆಗ ಸ್ವಾಮೀಜಿ ಮುಂತಾದವರಿದ್ದರು. ಶ್ರೀಮಾತೆಯವರು ಅಲ್ಲಿಗೆ ಬಂದಿದ್ದರಿಂದ ಸ್ವಾಮೀಜಿಯವರಿಗೆ ತುಂಬಾ ಆನಂದವಾಯಿತು. ನಡುವೆಯೇ ನಮ್ಮ ಸಾಮಾನು ಸರಂಜಾಮುಗಳು ಬಂದಿಳಿದವು. ಅದರಲ್ಲಿ ಹಾಸಿಗೆಯ ಹೊರೆ ತುಸು ದೊಡ್ಡದಾಗಿತ್ತು. ಅದು ಬಂದಿಳಿದ ಕೂಡಲೇ ಸ್ವಾಮೀಜಿ ಬಾಲಕನಂತೆ ಆನಂದದಿಂದ ಅದನ್ನು ಕುದುರೆ ಗಾಡಿಯ ಮೇಲೇರಿಸಿ ಕುಳಿತರು; ನಾನಾ ಅಂಗಭಂಗಿಗಳೊಂದಿಗೆ ಗಾಡಿಯನ್ನು ಓಡಿಸತೊಡಗಿದರು. ಶ್ರೀಮಾತೆಯವರು ಮಕ್ಕಳ ಆನಂದವನ್ನು ಕಂಡು ಚೆನ್ನಾಗಿ ನಕ್ಕರು; ಆನಂದಪಟ್ಟರು. ಇತ್ತ ನಮ್ಮ ಎದೆ ಢವಢವ ಹೊಡೆದುಕೊಳ್ಳುತ್ತಿತ್ತು. ನಮ್ಮ ಕಣ್ಣು , ಬಾಯಿ ಎಲ್ಲ ವಿವರ್ಣವಾಯಿತು. ನಮ್ಮ ಅವಸ್ಥೆಯನ್ನು ಕಂಡು ಶ್ರೀಮಾತೆ ಕೇಳಿದರು, ''ಲಕ್ಷ್ಮಿ, ನಿನಗೆ ಈಗೇನಾಯಿತು?'' ನಾನಂದೆ, ''ಅಣ್ಣನಿಗೆ ಹಾಗೆ ಮಾಡಬೇಡ ಎಂದು ಹೇಳಿ.'' ಅದಕ್ಕೆ ಶ್ರೀಮಾತೆ, ''ನೀನೇ ಹೇಳಮ್ಮ'' ಎಂದರು; ಬಳಿಕ ಸ್ವಾಮೀಜಿಗೆ ಹೇಳಿದರು, ''ಲಕ್ಷ್ಮಿ ಇಳಿಯುತ್ತಾಳಂತೆ.'' ಕೂಡಲೇ ಸ್ವಾಮೀಜಿ ಇಳಿದು, ನನಗೆ ಹೇಳಿದರು, ''ಏನಾಯಿತಕ್ಕ? ಒಳ್ಳೇ ಕುದುರೆ ಸಿಕ್ಕಿಬಿಟ್ಟಿದೆ!'' ನಾನಂದೆ, ''ಸಾಮಾನಿನ ಮಧ್ಯೆ ನನ್ನ ಜಗನ್ನಾಥನ ಚಿತ್ರಪಟವಿದೆ. ಅದು ಒಡೆದುಹೋದೀತು!'' ಅದಕ್ಕೆ ಸ್ವಾಮೀಜಿ, ''ನೀನು ಮೊದಲೇ ಹೇಳಬಹುದಾಗಿತ್ತು, ಹೇಳಿದ್ದಿದ್ದರೆ ಮತ್ತೆ ನಾನು ಇಳಿಯಬೇಕಾಗುತ್ತಿರಲಿಲ್ಲ'' ಎಂದು ಹೇಳುತ್ತ, ದೇವರ ಚಿತ್ರಪಟದತ್ತ ತಿರುಗಿ ನಮಸ್ಕಾರ ಮಾಡಿದರು. ಆಗ ನನಗೆ ತುಂಬ ಆನಂದವಾಯಿತು.

ಒಂದು ಸಲ ನಾನು ಕೆಲವು ಮಂದಿ ಭಕ್ತರೊಡನೆ ಶ್ರೀಮಾತೆಯವರನ್ನು ಭೇಟಿಯಾಗಲು ದಕ್ಷಿಣೇಶ್ವರದಿಂದ 'ಉದ್ಬೋಧನ' ಮನೆಗೆ ಬಂದಿದ್ದೆ. ನಮ್ಮ ನಡುವೆ ತುಂಬಾ ಹೊತ್ತು ಮಾತುಕತೆ ನಡೆಯಿತು. ಯೋಗಿನ್-ಮಾ ಜ್ವರ ಹಿಡಿದು ಮಲಗಿದ್ದಾರೆ ಎಂದು ಶ್ರೀಮಾತೆ ತಿಳಿಸಿದರು. ಇದನ್ನು ಕೇಳಿದ ನಾನು ಅವರನ್ನು ನೋಡಲು ಹೋದೆ. ಅಂದು ಅಲ್ಲೇ ತಂಗಲು ಯೋಗಿನ್-ಮಾ ನನ್ನನ್ನು ಒತ್ತಾಯಿಸಿದರು. ನಾನೆಂದೆ, ''ಹಲವಾರು ಬಗೆಯವರನ್ನೆಲ್ಲ ನನ್ನೊಂದಿಗೆ ಕರೆದುಕೊಂಡು ಬಂದಿದ್ದೇನೆ.

ಇಂದು ಹೋಗಿ ಬರುತ್ತೇನೆ.'' ಯೋಗಿನ್-ಮಾ ಅನಾರೋಗ್ಯದಿಂದ ಇದ್ದುದರಿಂದ ಅವರಿಗೆ ಹೆಚ್ಚು ಒತ್ತಾಯಿಸಲಾಗಲಿಲ್ಲ. ನನ್ನನ್ನು ಬೀಳ್ಕೊಡುವಾಗ ನನಗೇನಾದರೂ ತಿನ್ನಿಸಲು, ಕೊಡಲು ಶ್ರೀಮಾತೆಯವರಿಗೂ ನೆನಪಾಗಲಿಲ್ಲ. ಅನಂತರ ಶ್ರೀಮಾತೆ ಭಾವಿಸಿದರು, 'ಲಕ್ಷ್ಮಿಯನ್ನು ಚೆನ್ನಾಗಿ ಉಪಚರಿಸಲಾಗಲಿಲ್ಲ. ಅವಳು ಅದಕ್ಕಾಗಿ ಏನಂದುಕೊಳ್ಳುವಳೋ!' ಹೀಗೆ ಭಾವಿಸುತ್ತ ಅವರು ಚಿಂತೆಗೊಳಗಾದರು. ನಾನು ಅಂದು ಶಿಷ್ಯರೊಡನೆ ಎಂಟಲಿ (ಮಧ್ಯ ಕಲ್ಕತ್ತದಲ್ಲಿ ಒಂದು ಸ್ಥಳದ ಹೆಸರು)ಯಲ್ಲಿ ನಡೆಯುತ್ತಿದ್ದ ಶ್ರೀರಾಮಕೃಷ್ಣರ ಜನ್ಮ ಮಹೋತ್ಸವಕ್ಕೆ ಹೋಗಿದ್ದೆ. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆ ತಮ್ಮ ಆಶ್ರಯದಲ್ಲಿದ್ದ ವ್ಯಕ್ತಿಯೊಬ್ಬನಿಗೆ ಹೇಳಿದರು: ''ಅಯ್ಯೋ, ಲಕ್ಷ್ಮಿ ಹೋಗಿಬಿಟ್ಟಳು. ಅವಳಿಗೆ ಏನೂ ಕೊಡಲಾಗಲಿಲ್ಲ. ಇಗೋ, ಈ ಎರಡು ರೂಪಾಯಿ ಮತ್ತು ಹೊಸ ವಸ್ತ್ರ — ಇವನ್ನು ತೆಗೆದುಕೊಂಡು ಹೋಗಿ, ಅವಳಿಗೆ ಕೊಟ್ಟು ಬಾ.'' ಶ್ರೀಮಾತೆಯವರ ಆದೇಶದಂತೆ ಆ ವ್ಯಕ್ತಿ ತಡವಿಲ್ಲದೆ ಆ ವಸ್ತುಗಳನ್ನು ಎಂಟಲಿ ತನಕ ತೆಗೆದು ಕೊಂಡು ಬಂದು, ನನಗೆ ಕೊಟ್ಟುಹೋದ.

ಒಂದು ಸಲ ಕಾಮಾರಪುಕುರದಲ್ಲಿ ಒಬ್ಬ ಭಕ್ತ ಶ್ರೀಮಾತೆಯವರೊಂದಿಗೆ ಮಾತುಕತೆ ನಡೆಸುತ್ತಿದ್ದ. ಆಗ ಅಲ್ಲಿ ನಾನೂ ಇದ್ದೆ. ಆ ಭಕ್ತ ಅಲ್ಲಿಂದ ಹೊರಡುವಾಗ, ಶ್ರೀಮಾತೆ ಅವನಿಗೆ ಹೇಳಿದರು, ''ನನ್ನನ್ನು ಕರೆ (ಪ್ರಾರ್ಥಿಸು).'' ಅನಂತರ ಹೇಳಿದರು, ''ಠಾಕೂರರನ್ನು ಕರೆ, ಅವರನ್ನು ಕರೆದರೆ ಎಲ್ಲವೂ ನೆರವೇರುವುದು.''

**ನಾನು :** ಇಲ್ಲಮ್ಮಾ, ಇದೇನು? ನೀವು ಮಾಡುವುದು ದೊಡ್ಡ ಅನ್ಯಾಯ. ಶಿಷ್ಯಂದಿರನ್ನು ಹೀಗೆ ಮರುಳು ಮಾಡಿದರೆ ಅವರೇನು ಮಾಡಬಲ್ಲರು?

**ಶ್ರೀಮಾತೆ :** ಏಕೆ, ನಾನೇನು ಮಾಡಿದೆ?

**ನಾನು :** ನೀವು ಈ ಕ್ಷಣ ಹೇಳಿದಿರಿ, ನನ್ನನ್ನು ಕರೆ ಅಂತ. ಮತ್ತೆ ಹೇಳಿದಿರಿ, ಠಾಕೂರರನ್ನು ಕರೆ ಅಂತ.


**ಶ್ರೀಮಾತೆ :** ಠಾಕೂರರನ್ನು ಕರೆದರೆ ಮಾತ್ರವೇ ಎಲ್ಲವೂ ನಡೆಯುವುದು.

**ನಾನು :** ಅಮ್ಮಾ, ನೀವು ಹೀಗೆ ಮರುಳುಮಾಡುವುದು ನಮ್ಮ ಪಾಲಿಗೆ ಅನ್ಯಾಯ. (ಭಕ್ತನಿಗೆ) ನೋಡು, ಇವತ್ತು ನಾನು ಶ್ರೀಮಾತೆಯವರಿಂದ ಈ ಹೊಸ ವಿಷಯವನ್ನು ಕೇಳಿದೆ : 'ನನ್ನನ್ನು ಕರೆ' ಅಂತ. ನೀನು ಎಂದಿಗೂ ಅವರ ಈ ಮಾತನ್ನು ಮರೆಯಬೇಡ. ಠಾಕೂರರು ಅಂದರೆ ಇನ್ನು ಯಾರಂತೆ? ನೀನು ಶ್ರೀಮಾತೆಯವರನ್ನೇ ಕರೆ. ಶ್ರೀಮಾತೆಯವರು ಸ್ವತಃ ತಾವೇ ಈ ಮಾತನ್ನು ನಿನಗೆ ಹೇಳಿದರು – ಇದೇ ನಿನ್ನ ಮಹಾನ್ ಸೌಭಾಗ್ಯ. ಶ್ರೀಮಾತೆಯವರನ್ನೇ ಕರೆ. (ಶ್ರೀಮಾತೆಯವರಿಗೆ) ನೋಡಮ್ಮಾ ಹೇಗೆ? ಈಗ ಆಗಿ ಹೋಯಿತಲ್ಲ?''

ಶ್ರೀಮಾತೆಯವರು ಮೌನ ತಾಳಿ ತಮ್ಮ ಸಮ್ಮತಿಯ ಲಕ್ಷಣವನ್ನು ಸೂಚಿಸಿದರು.

*(ಸಂಕಲನ: ಸೋಮನಾಥ ಭಟ್ಟಾಚಾರ್ಯ)*

**ಯುವಚೇತನ**



## ನಿಜವಾದ ಗುರು ಯಾರು?

ನಿಜವಾದ ಗುರು ಕಾಲಕಾಲಕ್ಕೆ ಅವತಾರ ಮಾಡುವ ಮಹಾ ಆಧ್ಯಾತ್ಮಿಕ ಶಕ್ತಿ. ಅವನು ಆ ಆಧ್ಯಾತ್ಮಿಕ ಶಕ್ತಿಯನ್ನು ಗುರುಶಿಷ್ಯರ ಪರಂಪರೆಯ ಮೂಲಕ ಮುಂದಿನವರಿಗೆ ನೀಡುವನು. ಈ ಆಧ್ಯಾತ್ಮಿಕ ಪ್ರವಾಹ ಕಾಲಕಾಲಕ್ಕೆ ಗತಿಯನ್ನು ಬದಲಾಯಿಸುವುದು. ನದಿ ಹೇಗೆ ಕೆಲವು ವೇಳೆ ಹಳೆಯ ಪಾತ್ರವನ್ನು ಬಿಟ್ಟು ಹೊಸ ಪಾತ್ರವನ್ನು ಮಾಡಿಕೊಳ್ಳುವುದೋ ಅದರಂತೆ ಇದು. ಆದಕಾರಣ ಹಳೆಯ ಧಾರ್ಮಿಕ ಪಂಗಡಗಳು ಕೆಲವು ಕಾಲದ ಮೇಲೆ ನಿರ್ಜೀವವಾಗಿ ಹೋಗುವುವು. ಚೇತನವಿರುವ ಹೊಸ ಹೊಸ ಪಂಥಗಳು ಹುಟ್ಟುವುವು. ನಿಜವಾಗಿಯೂ ಬುದ್ಧಿವಂತರಾಗಿರುವವರು ಹೊಸ ಜೀವಕಳೆ ತುಂಬಿರುವ ಪಂಥದ ಆಶ್ರಯದಲ್ಲಿ ಬೆಳೆಯುವರು. ಹಳೆಯ ಪಂಥಗಳು ವಸ್ತುಪ್ರದರ್ಶನಾಲಯದಲ್ಲಿರುವ ದೊಡ್ಡ ದೊಡ್ಡ ಮೃಗಗಳ ಅಸ್ಥಿಪಂಜರದಂತೆ. ಅವುಗಳನ್ನು ನಾವು ಗೌರವದಿಂದ ಕಾಣಬೇಕು. ಆದರೆ ಅವು ಮಾನವನ ತೀವ್ರ ಆಧ್ಯಾತ್ಮಿಕ ಹಂಬಲವನ್ನು ತೃಪ್ತಿಪಡಿಸಲಾರವು. ಒಣಗಿದ ಮಾವಿನ ಮರಕ್ಕೆ ಅದರ ಹಣ್ಣನ್ನು ಇಚ್ಛಿಸುವವನ ಬೇಡಿಕೆಯನ್ನು ತೃಪ್ತಿಪಡಿಸಲು ಅಸಾಧ್ಯವಾದಂತೆ.

ನಮ್ಮಲ್ಲಿ ಏನೋ ಒಂದು ಆಧ್ಯಾತ್ಮಿಕ ಮಹಾಸಂಪತ್ತು ಇದೆ ಎಂದು ನಾವು ಭಾವಿಸುವೆವು. ನಾವು ಈ ಅಹಂಕಾರದಿಂದ ಪಾರಾಗಬೇಕು. ಇದನ್ನು ತೊರೆದು ಗುರುವಿನ ಅಡಿದಾವರೆಯಲ್ಲಿ ಶರಣಾಗತರಾಗಬೇಕು. ಪೂರ್ಣತೆಯೆಡೆಗೆ ಯಾವುದು ಒಯ್ಯುವುದು ಎಂದು ಗುರುವಿಗೆ ಮಾತ್ರ ಗೊತ್ತು; ನಮಗೆ ಗೊತ್ತಿಲ್ಲ. ನಮಗೆ ಏನೂ ಗೊತ್ತಿಲ್ಲ. ಇಂತಹ ದೈನ್ಯತೆಯಿದ್ದರೆ ಆಧ್ಯಾತ್ಮಿಕ ಸತ್ಯವನ್ನು ಸ್ವೀಕರಿಸಲು ನಾವು ಯೋಗ್ಯರಾಗುವೆವು. ನಮ್ಮಲ್ಲಿ ಅಹಂಕಾರದ ಅವಶೇಷ ಸ್ವಲ್ಪವಿದ್ದರೂ ಸತ್ಯ ಮನಸ್ಸಿಗೆ ಹೊಳೆಯುವುದಿಲ್ಲ. ನೀವೆಲ್ಲರೂ ಅಹಂಕಾರದ ಭೂತವನ್ನು ನಿರ್ಮೂಲ ಮಾಡಲು ಯತ್ನಿಸಬೇಕು. ಪರಮಾರ್ಥದ ಸಾಕ್ಷಾತ್ಕಾರಕ್ಕೆ ಸಂಪೂರ್ಣ ಶರಣಾಗತಿಯೊಂದೇ ಮಾರ್ಗ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೭, ಪುಟ ೩೩೯–೪೦)*